# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

☎ ೦೮೩೯೪-೨೪೧೩೩೫ ಫ್ಯಾಕ್ಸ್ : ೦೮೩೯೪-೨೪೧೩೩೫, ಇ-ಅಂಚೆ : kannadauniversity@gmail.com


ಸಂಖ್ಯೆ:ಕವಿಹಂ/ಕುಸ/೨೯ನುಹ:ಸುತ್ತೋಲೆ:೨೦೨೧-೨೨ | 321

ಏಪ್ರಿಲ್ ೦೭, ೨೦೨೧

## ಸುತ್ತೋಲೆ

ಕನ್ನಡ ವಿಶ್ವವಿದ್ಯಾಲಯದ ೨೯ನೇ ನುಡಿಹಬ್ಬವನ್ನು ದಿನಾಂಕ ೦೯.೦೪.೨೦೨೧ರಂದು ಸಂಜೆ ೫.೩೦ ಗಂಟೆಗೆ 'ನವರಂಗ'ದಲ್ಲಿ ಆಯೋಜಿಸಲಾಗಿದೆ. ಕೋವಿಡ್-೧೯ ಎರಡನೇ ಅಲೆಯ ಹರಡುವಿಕೆಯ ಹಿನ್ನೆಲೆಯಲ್ಲಿ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ ಸಭೆಯಲ್ಲಿ ಕೇವಲ ೨೦೦ ಜನರಷ್ಟೇ ಪ್ರತ್ಯಕ್ಷವಾಗಿ ಭಾಗವಹಿಸಬಹುದಾಗಿದೆ. ಹಾಗಾಗಿ ಪದವಿ ಸ್ವೀಕರಿಸುವ ಪದವೀಧರರು, ಅವರೊಂದಿಗೆ ಬರಬಹುದಾದ ಓರ್ವ ಸಹವರ್ತಿ, ಸಂಶೋಧನಾ ಮಾರ್ಗದರ್ಶಕರು, ನುಡಿಹಬ್ಬದ ವಿವಿಧ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು, ಅಧಿಕಾರಿ ವರ್ಗದವರು ಹಾಗೂ ಆಹ್ವಾನಿತ ಗಣ್ಯರು ನುಡಿಹಬ್ಬದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಬೇಕೆಂದೂ ಉಳಿದ ಸಿಬ್ಬಂದಿಗಳು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪ್ರಸಾರಾಂಗದ ಮುಂಭಾಗದ ಬಯಲು ಪ್ರದೇಶದಲ್ಲಿ ಅಳವಡಿಸಲಾಗುವ ಎಲ್.ಇ.ಡಿ. ಪರದೆಯಲ್ಲಿ ಅಥವಾ ಆಮಂತ್ರಣ ಪತ್ರಿಕೆಯಲ್ಲಿ ನಮೂದಿಸಿರುವ ಜೂಮ್ ಮೀಟಿಂಗ್ ಐಡಿ ಮೂಲಕ ಸಂಪರ್ಕ ಕಲ್ಪಿಸಿಕೊಂಡು ೨೯ನೇ ನುಡಿಹಬ್ಬವನ್ನು ವೀಕ್ಷಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಕೋವಿಡ್-೧೯ರ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುವುದರಿಂದ ಈ ವ್ಯವಸ್ಥೆಗೆ ಎಲ್ಲರೂ ಸಹಕರಿಸಬೇಕೆಂದು ಕೋರಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

**ಇವರಿಗೆ,**
ಎಲ್ಲ ವಿಭಾಗಗಳ ಮುಖ್ಯಸ್ಥರಿಗೆ–ತಮ್ಮ ವಿಭಾಗದ ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಿದೆ.

**ಪ್ರತಿಗಳು**
೧. ಮಾನ್ಯ ಕುಲಪತಿಯವರ ಆಪ್ತಶಾಖೆ, ಕ.ವಿ.ಹಂ.
೨. ಕಚೇರಿ ಪ್ರತಿ